ಶ್ರೀ ಆರ್. ದಯಾನಂದ ಸಾಗರ್.—40 ಲಕ್ಷಕ್ಕೆ ಮೇಲ್ಪಟ್ಟು ಬೇಕಾಗುತ್ತದೆ. ಆದರೆ ನಮ್ಮಲ್ಲೀಗ 16 ಲಕ್ಷ ತಯಾರಾಗುತ್ತಿದೆ. ಉಳಿದುದನ್ನು ಏಡೆಡ್ ಗ್ರೇನೇಜ್‌ಗಳಿಂದ ತಗೆದು ಕೊಳ್ಳುತ್ತಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಪ್ರೈವೇಟ್ ಏಡೆಡ್ ಗ್ರೇನೇಜುಗಳಿಂದ ಮೊಟ್ಟೆಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ತುಂಬಾ ನಷ್ಟವಾಗುತ್ತಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ದಯಾನಂದ ಸಾಗರ್.—ಆ ಕಾರಣದಿಂದಲೇ ನಾವೀಗ ನಮ್ಮಲ್ಲಿ ಪೊಡಕ್ಷನ್ನನ್ನು 16 ಲಕ್ಷಕ್ಕೇರಿಸಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಈಗ ಈ ರೋಗರಹಿತ ಮೊಟ್ಟೆಗಳು ಸರ್ಕಾರಿ ಗ್ರೇನೇಜಿನಲ್ಲಿ ಎಷ್ಟು ಪರ್ಸೆಂಟ್ ತಯಾರಾಗುತ್ತೆ ಮತ್ತು ಖಾಸಗಿ ಗ್ರೇನೇಜುಗಳಲ್ಲಿ ಎಷ್ಟು ಪರ್ಸೆಂಟ್ ತಯಾರಾಗುತ್ತಿದೆ ?

ಶ್ರೀ ಆರ್. ದಯಾನಂದ ಸಾಗರ್.—ಖಾನಗಿ ಗ್ರೇನೇಜುಗಳು ಯಾವುದೂ ಇಲ್ಲ. ಈ ಮೊಟ್ಟೆಗಳನ್ನು ತಯಾರಿಸತಕ್ಕವರು ಇಬ್ಬರೇ. ಒಂದು ಸರ್ಕಾರ ಮತ್ತು ಇನ್ನೊಂದು ಸರ್ಕಾರದಿಂದ ಎಯಿಡ್ ತೆಗೆದುಕೊಂಡಿರುವ ಗ್ರೇನೇಜುಗಳು. ಈ ಎರಡರ ವಿನಾ ಬೇರೆ ಯಾರಾದರೂ ತಯಾರಿಸಿದರೆ ಅದು ಅರ್ಹೆಸ್ ಆಗುತ್ತೆ.

ಶ್ರೀ ಜಿ. ವಿ. ಗೌಡ.—ಸರ್ಕಾರದವರು ಹೊಸದಾಗಿ ಗ್ರೇನೇಜುಗಳನ್ನು ತೆರೆಯುವ ಸಂಭವ ವಿಲ್ಲ ಅಂತ ಹೇಳಿದೆ. ಹಾಗಾದರೆ ಈ ರೋಗರಹಿತ ಮೊಟ್ಟೆಗಳ ಡಿಮ್ಯಾಂಡನ್ನು ಹೇಗೆ ಪೂರೈಕೆ ಮಾಡುತ್ತಾರೆ ?

ಶ್ರೀ ಆರ್. ದಯಾನಂದ ಸಾಗರ್.—ಕೋಲಾರದಲ್ಲಿ ತೆರೆಯುವುದಿಲ್ಲ ಅಂತ ಹೇಳಿದೆ ಅಷ್ಟೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ತಾಲ್ಲೂಕಿನಲ್ಲಿ ಮತ್ತೆರಡು ಗ್ರೇನೇಜುಗಳನ್ನು ತೆರೆಯಬೇಕೆಂದು ಜನಗಳಿಂದ ಸರ್ಕಾರಕ್ಕೆ ಮನವಿಗಳು ಬಂದಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್.—ಅವುಗಳಿಗೇನು ಬೇಕಾದಷ್ಟು ಬರುತ್ತಿವೆ. ಈಗ ಈ ಮೊಟ್ಟೆಗಳಿಗೆ ಒಂದಕ್ಕೆ ಹತ್ತರಷ್ಟು ಡಿಮ್ಯಾಂಡ್ ಜಾಸ್ತಿಯಾಗಿದೆ. ಈ ಗ್ರೇನೇಜುಗಳನ್ನು ಹೆಚ್ಚಿಸಲು ಹಣ ಒದಗಿದಂತೆಲ್ಲ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಬನಪ್ಪ.—ಈ ಏಡೆಡ್ ಗ್ಯಾನರಿಗಳನ್ನು ತೆಗೆದುಹಾಕಲಾಗುತ್ತದೆಂದು ವರ್ತಮಾನವಿದೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್.—ಎರಡೂ ಇರುತ್ತವೆ.

ಶ್ರೀ ಎಸ್. ವಿ. ರಾಮೇಗೌಡ.—ಈ ಸರ್ಕಾರಿ ಗ್ರೇನೇಜುಗಳನ್ನು ನಿಲ್ಲಿಸಿಬಿಡುತ್ತಾರೆಂದು ಜನರು ಹೇಳುತ್ತಿದ್ದಾರೆ. ಇದು ನಿಜವೇ ?

ಶ್ರೀ ಆರ್. ದಯಾನಂದ ಸಾಗರ್.—ಅದು ಸುಳ್ಳು. ನಿಜವಲ್ಲ.

ಶ್ರೀ ವಿ. ಎಂ. ದೇವ್.—ನಮಗೆ ಈಗ ಒಟ್ಟು ಬೇಕಾಗಿರತಕ್ಕ ಮೊಟ್ಟೆಗಳೆಷ್ಟು ?

ಶ್ರೀ ಆರ್. ದಯಾನಂದ ಸಾಗರ್.—40 ಲಕ್ಷ ಅಂತ ಆಗಲೇ ತಿಳಿಸಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಮ್ಮ ಸಂಸ್ಥಾನಕ್ಕೆ ಅಗತ್ಯವಾಗಿ ಬೇಕಾಗತಕ್ಕ ಮೊಟ್ಟೆಗಳನ್ನು ಒದಗಿಸಲು ಸರ್ಕಾರದವರು ಏನಾದರೂ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ?

ಶ್ರೀ ಆರ್. ದಯಾನಂದ ಸಾಗರ್.—ಸರ್ಕಾರಕ್ಕೂ ತುಂಬಾ ಆಸೆಯಿದೆ. ಆದರೆ ಅದಕ್ಕೆಲ್ಲ ಹಣಬೇಕಲ್ಲವೇ ?

ಶ್ರೀ ಪಿ. ವೆಂಕಟಗಿರಿಯಪ್ಪ.—ಬೇರೆ ರಾಜ್ಯಗಳಲ್ಲಿ ಕೂಡ ಕೇವಲ ಸರ್ಕಾರಿ ಗ್ರೇನೇಜ್‌ಗಳು ಮಾತ್ರ ಇದ್ದು ಪ್ರೈವೇಟ್ ಗ್ರೇನೇಜ್‌ಗಳಿಲ್ಲವೆಂಬ ವಿಚಾರ ತಮಗೆ ಗೊತ್ತಿದೆಯೇ ?

ಶ್ರೀ ಆರ್. ದಯಾನಂದ ಸಾಗರ್.—ಆ ವಿಚಾರ ನನಗೆ ಗೊತ್ತಿಲ್ಲ.

Posting of Veterinary Doctor to Pavagada.

*Q.—404. Sri R. KENCHAPPA (Pavagada).—

Will the Government be pleased to state :—

(*a*) whether it has come to their notice that sheep and goats are dying in the Pavagada Taluk for the past seven to eight months;

(*b*) the number of sheep and goats dead so far ;

(*c*) whether they have received representations stating that in spite of having brought this to the notice of concerned doctors, no medical treatment has been extended since the medicines are said to have been exhausted ;

(*d*) if so, the steps they have taken in this behalf ;

(*e*) whether they would take immediate steps to appoint Veterinary Doctor in order to avoid hardships caused in the absence of such a doctor in this Taluk ?

A.—Sri M. V. KRISHNAPPA (Minister for Revenue).—

(*a*) Yes.

(*b*) 418.

(*c*) Yes.

(*d*) About 16,218 sheep and goats have been dosed by the Veterinary Inspector, Madhugiri, who was in charge of the dispensary at Pavagada.

(*e*) A Veterinary Inspector has since been posted to Pavagada.

ಶ್ರೀ ಆರ್. ಕೆಂಚಪ್ಪ.—ಪಾವಗಡ ತಾಲ್ಲೂಕಿಗೆ ಜಾನುವಾರು ಆಸ್ಪತ್ರೆಗಳಿಗೆ 62-63ನೇ ಸಾಲಿನಲ್ಲಿ ಒದಗಿಸಲಾದ ಔಷಧಿಗಳ ಮೊಬಲಗೆಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಮೊಬಲಗಿನ ಔಷಧಿ ಒದಗಿಸಲಾಯಿತೆಂಬುದನ್ನು ಹೇಳುವುದಕ್ಕೆ ಈಗ ಸಾಧ್ಯವಿಲ್ಲ. ಈಗ ಪಾವಗಡಕ್ಕೆ ಸರ್ಕಾರದವರು ಎಕ್ಫೋ ಕ್ಲೋರಿನ್ ಮತ್ತು ಹೆಂಟೋ ಕ್ಲೋರಿನ್ ಎಂಬ ಈ ಎರಡು ಔಷಧಿಗಳನ್ನು ಅಂದರೆ 2,500 ರೂಪಾಯಿಗಳ ಔಷಧಿಯನ್ನು ಕಳುಹಿಸಿದ್ದಾರೆ.

ಶ್ರೀ ಎಸ್. ವಿ. ರಾಮೇಗೌಡ.—ಆ ಕುರಿಗಳಿಗೆ ಬಂದಿರತಕ್ಕ ರೋಗ ಯಾವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ವರಂಸ್ ರೋಗ ಅಂತ ಅದು. ಮಳೆ ಬೆಳೆಯಿಲ್ಲದೆ ಹೋದಾಗ ಸಿಕ್ಕಿದುದನ್ನು ತಿಂದು ಕೊಚ್ಚೆ ನೀರನ್ನು ಕುಡಿದರೆ ಈ ರೋಗ ಬರುತ್ತೆಂದು ಹೇಳುತ್ತಾರೆ. ಹೀಗಾಗಿ ಅಲ್ಲಿ 300-400 ಕುರಿಗಳು ಸತ್ತು ಹೋಗಿವೆ. ಅದಕ್ಕೆ ತಕ್ಷಣ ಅಲ್ಲಿಗೆ 2,500 ರೂಪಾಯಿಗಳ ಔಷಧಿಯನ್ನು ಕಳುಹಿಸಿದ್ದೇವೆ. ಈಗ ಅದು ಸಂಪೂರ್ಣವಾಗಿ ಹತೋಟಿಗೆ ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಅಲ್ಲಿ ಸಾಕಷ್ಟು ಪಶುವೈದ್ಯ ಶಾಲೆಗಳನ್ನು ಇಟ್ಟಿದ್ದರೆ ಈ ರೋಗ ಬರುವುದಕ್ಕೆ ಕಾರಣವಾಗುತ್ತಿರಲಿಲ್ಲವೆಂಬ ಅಂಶ ಸರ್ಕಾರದವರಿಗೆ ಗೊತ್ತಾಗುತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಸ್ಪತ್ರೆಗಳನ್ನು ತೆರೆಯುವುದಕ್ಕೂ ಈ ರೋಗ ಬರುವುದಕ್ಕೂ ಏನೂ ಸಂಬಂಧವೇ ಇಲ್ಲ. ಒಳ್ಳೆ ನ್ಯೂಟ್ರಿಷಸ್ ಆಹಾರ ಸಿಕ್ಕದಿದ್ದಾಗ ಈ ರೋಗ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸ್ಥಳದಲ್ಲಿ ಡಾಕ್ಟರಿರಲಿಲ್ಲ ಅಂತ ಹೇಳಲಾಗಿದೆ. ಎಷ್ಟು ದಿವಸಗಳಿಂದ ಡಾಕ್ಟರು ಇರಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡಾಕ್ಟರ ಅಭಾವದಿಂದ ಅಲ್ಲಿ ಡಾಕ್ಟರಿಲ್ಲದಿದ್ದರೂ ಸ್ಯಾಕ್ ಮೆಟ್ ಇತ್ಯಾದಿಯವರೆಲ್ಲರೂ ಇದ್ದರು. ಮಧುಗಿರಿ ಡಾಕ್ಟರು ಅಲ್ಲಿಗೆ ಹೋಗಿ ನೋಡಿಕೊಳ್ಳುತ್ತಿದ್ದರು. ಈಗ ಅಲ್ಲಿಗೆ ಡಾಕ್ಟರನ್ನು ಹಾಕಲಾಗಿದೆ.

ಶ್ರೀ ಎಸ್. ವಿ. ರಾಮೇಗೌಡ.—ಈ ಕುರಿಗಳು ಎಲ್ಲೆಲ್ಲಿ ಜಾಸ್ತಿ ಇರುತ್ತವೆಯೋ ಅಲ್ಲಲ್ಲಿ ಈ ರೋಗ ತಡೆಗಟ್ಟಲು ಈ ಡೋಸೇಜ್ ಕೊಡಲು ಪ್ರಯತ್ನ ಮಾಡುತ್ತಿರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವರಮ್ ಡಿಸೀಜ್ ನಮ್ಮ ದೇಶದಲ್ಲಿ ಎಲ್ಲಯೂ ಇಲ್ಲ. ಎಲ್ಫೋ ಇತ್ತೀಚೆಗೆ ಪಾವಗಡದಲ್ಲಿ ಮಾತ್ರ ಪ್ರಾರಂಭವಾಗಿದೆ. ಅಲ್ಲ ಬಹಳ ದಿವಸಗಳಿಂದ ಮಳೆಯೇ ಬಂದಿಲ್ಲ. ಹೀಗಾಗಿ ಅಲ್ಲಿ ಕುರಿಗಳಿಗೆ ಒಳ್ಳೆಯ ಮೇವು—ನೀರು ಸಿಕ್ಕದೆ ಈಗ ಅಲ್ಲಿ ಈ ರೋಗ ತಲೆ ಹಾಕಿದೆ. ಅಲ್ಲಿರತಕ್ಕ ಸುಮಾರು 17 ಸಾವಿರ ಕುರಿಗಳಿಗೆಲ್ಲ ಔಷಧಿ ಕಳುಹಿಸಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸತ್ತು ಹೋದ ಕುರಿಗಳನ್ನು ಏತಕ್ಕೆ ಉಪಯೋಗಿಸುತ್ತಾರೆ ?

Mr. SPEAKER.—I have not allowed that.

ಶ್ರೀ ವಿ. ಎಂ. ದೇವ್.—ಅಲ್ಲಿ 16,218 ಕುರಿಗಳಿಗೆ ಡೋಸೇಜ್ ಮಾಡಲಾಗಿದೆ ಎಂತ ಹೇಳಿದ್ದಾರೆ. ಬಾಕಿ ಕುರಿಗಳ ಗತಿಯೇನು ?

ಶ್ರೀ ಎಂ. ವಿ. ಕೃಷ್ಣಪ್ಪ —ಎಲ್ಲ ಕುರಿಗಳಿಗೂ ರೋಗ ಬಂದಿಲ್ಲ. ರೋಗ ಬಂದಿದ್ದ ಕುರಿಗಳಿಗೆ ಮಾತ್ರ ಡೋಸೇಜ್ ಮಾಡಲಾಗಿದೆ. ಇದು ಅಂಟು ಜಾಡ್ಯವಲ್ಲ.

ಶ್ರೀ ಆರ್. ಕೆಂಚಪ್ಪ.—ವೆಟರಿನೆರಿ ಡಾಕ್ಟರುಗಳಿಗೆ ನರಿಯಾದ ಅನುಭವವಿಲ್ಲದೆ, ಈ ರೋಗ ಕಂಡುಹಿಡಿಯಲು ಬಾರದೆ ಇರುವುದು ಇಷ್ಟು ಕುರಿಗಳು ನತ್ತು ಹೋಗಲು ಕಾರಣವಾಯಿತಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಹೇಳುತ್ತಿರುವುದು ನರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಯಿಲೆಯಿಂದ ನತ್ತ ಕುರಿಗಳನ್ನು ಹೂಳುವಂತೆ ನಿರ್ಬಂಧ ಪಡಿಸಲಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ನಿರ್ಬಂಧ ಈಗಲೂ ಜಾರಿಯಲ್ಲಿ ಇದ್ದೇ ಇದೆ. ಸಾಮಾನ್ಯ ಕಾಯಿಲೆಯಿಂದ ನತ್ತ ಕುರಿಗಳ ಚರ್ಮವನ್ನು ಮಾತ್ರ ಸುಲಿದು ಕೊಳ್ಳುತ್ತಾರೆ. ಆ ಮಾಂಸವನ್ನು ನಾಯಿ—ನರಿಗಳು ಂದು ಹಾಕುತ್ತವೆ.

ಶ್ರೀ ಅಂಗಡಿ ಚನ್ನಬಸಪ್ಪ.—ನರಿಯಾದ ಆಹಾರವಿಲ್ಲದೆ ಕುರಿಗಳಿಗೆ ಇಂಥ ಪರಿಸ್ಥಿತಿ ಬರುತ್ತದೆಂದು ಹೇಳುತ್ತಾರೆ. ನರಿಯಾದ ಆಹಾರವನ್ನು ಈ ಪ್ರಾಣಿಗಳಿಗೆ ಒದಗಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ.ವಿ. ಕೃಷ್ಣಪ್ಪ.—ಪಾವಗಡ ತಾಲ್ಲೂಕು ಮೆ ೈಸೂರು ನಂಸ್ಥಾನದಲ್ಲಿ highly scarcity affected area. ಅಲ್ಲಿ ಕುರಿ ಹೆಚ್ಚಾಗಿ ಇವೆ. ಮಳೆ ಕಡಮೆಯಾದ ವರ್ಷದಲ್ಲಿ ಕುರಿಗಳಿಗೆ ಮೇವನ್ನು ಒದಗಿಸುವುದಕ್ಕಾಗುವುದಿಲ್ಲ ಸಾಯುವುದು ಮತ್ತೆ ಪ್ರಬಲವಾಗುವುದು. ಹೀಗೆ ಪೂರ್ವದಿಂದಲೂ ಅಭ್ಯಾಸವಾಗಿದೆ.

Sri N. O. SAMAJI (Spoke in Marathi)—.

ಶ್ರೀ ಎಂ. ವಿ. ಕೃಷ್ಣಪ್ಪ.—ಈ worm disease ಬಂದರೆ 15-20 ದಿವಸಗಳಲ್ಲಿ ಕುರಿ ನತ್ತು ಹೋಗುತ್ತದೆ. ಈ ರೋಗ ಪ್ರಾರಂಭವಾದ ಕೆಲವು ದಿವಸಗಳಿಗೇ ಮಧುಗಿರಿ ಡಾಕ್ಟರು ಹೋಗಿ, ಔಷಧಿಗಳನ್ನೆಲ್ಲ ಬೆಂಗಳೂರಿನಿಂದ ತರಿಸಿಕೊಂಡು ಚಿಕಿತ್ಸೆ ಪ್ರಾರಂಭ ಮಾಡಿದರು. 5-6 ತಿಂಗಳಲ್ಲಿ 400 ಕುರಿ ನತ್ತು ಹೋಗಿವೆ. ಈಗ ಹತೋಟಿಗೆ ತಂದಿವ್ವಾರೆ.

ಶ್ರೀ ಎಸ್. ವಿ. ರಾಮೇಗೌಡ.—ಕುರಿಗಳಿಗೆ ರೋಗ ಬರುವುದಕ್ಕೆ ಮೊದಲು dosage ಮಾಡಿದರೆ ಹೆಚ್ಚಾಗಿ ಸಾಯುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಂಸ್ಥಾನದಲ್ಲರುವ ಎಲ್ಲ ಕುರಿಗಳಿಗೂ ಡೋಸೇಜ್ ಮಾಡುವುದ ಕ್ಕಾಗುವುದಿಲ್ಲ, ಎಲ್ಲಿ ರೋಗ ಬರುತ್ತಿದೆಯೋ ಆ ಪ್ರದೇಶದಲ್ಲಿ ಮಾತ್ರ ಮಾಡಬಹುದು.

Sanction of Irrigation Loans in Gundlupet Taluk for the last Three Years.

*Q.—666. Smt. K. S. NAGARATHNAMMA (Gundlupet).—

Will the Government be pleased to state :—

(*a*) the number of ryots who have been sanctioned irrigation loans in Gundlupet Taluk for the last three years ;

(*b*) whether repayment by instalments is being made regularly ;

(*c*) whether they are aware that the ryots are being put to inconvenience due to failure of crops for the last 8 to 10 years and are therefore not in a position to repay their loans even in instalments ;

(*d*) whether they would take action to see that no penal interest is collected from such persons in distress ?